ಮೂಲ ದಾವಾ ಸಂಖ್ಯೆ. 82/2015 ಪಿ ಡಬ್ಲ್ಯೂ 1 ಚಿತ್ರಗಾರ ಮಲ್ಲಿಕಾರ್ಜುನ ಬಿನ್ ಲಕ್ಷ್ಮಣಪ್ಪ

(ದಿನಾಂಕ 08-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಬಿ ವಿ ವಕೀಲರಿಂದಃ-

ಈ ದಾವೆಯನ್ನು ನಾನು ಸರ್ವೆ ನಂ. 140 ಸಿ/1 ಗೆ ಸಂಬಂಧಿಸಿದಂತೆ ದಾಖಲಿಸಿದ್ದೇನೆ. ನಾನು ಈ ದಾವೆಯನ್ನು 3 ಎಕರೆ 25 ಸೆಂಟ್ಸ ಜಮೀನಿಗೆ ಸಂಬಂಧಿಸಿದಂತೆ ದಾಖಲಿಸಿದ್ದೇನೆ. ದಾವಾಸ್ತಿಯು ನಮ್ಮ ದೊಡ್ಡಪ್ಪ ಮತ್ತು ನಮ್ಮ ತಂದೆಯವರು ಕೂಡು ಕುಟುಂಬದಲ್ಲಿ ಖರೀದಿಸಿದ್ದರಿಂದ ಈ ಆಸ್ತಿಯನ್ನು ನಮಗೆ ಕೊಟ್ಟಿದ್ದಾರೆ. ಖರೀದಿ ಪತ್ರವು ನಮ್ಮ ದೊಡ್ಡಪ್ಪನಾದ ಚಿತ್ರಗಾರ ಅಥವಾ ಜೀನಗಾರ ರಾಮಣ್ಣನವರ ಹೆಸರಿನಲ್ಲಿದೆ ಖರೀದಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಖರೀದಿ ಪತ್ರ 4 ಎಕರೆಗೆ ಸಂಬಂಧಿಸಿದಂತೆ ಇದೆ. ಖರೀದಿ ಪತ್ರ 4 ಎಕರೆ ಜಮೀನ್ನು ಇದ್ದು ದಾವೆಯನ್ನು 3.25 ಸೆಂಟ್ಸಗೆ ದಾಖಲಿಸಿದ್ದೀರಿ ಉಳಿದ ಕ್ಷೇತ್ರದ ಬಗ್ಗೆ ಏನು ಎಂದರೆ ಸಾಕ್ಷಿಯು ಹಿಂದಿನ ಪಹಣಿಯಲ್ಲಿ ಕಂದಾಯ ಇಲಾಖೆಯವರು ತಪ್ಪು ನಮೂದಿಸಿದ್ದಾರೆ. ಈ ವಿಚಾರವನ್ನು ನಾನು ವಾದಪತ್ರದಲ್ಲಿ ಬರೆಸಿಲ್ಲ ನೀವು ಯಾವ ಕಾರಣಕ್ಕಾಗಿ ಬರೆಸಿಲ್ಲವೆಂದರೆ ಸಾಕ್ಷಿಯು ಚಾಲ್ತಿ ದಾಖಲಾತಿಯನ್ನು ನೋಡಿ ಬರೆಸಿದ್ದೇನೆ.

ಸನ್ 1967-68 ರಿಂದ ದಾವಾ ಜಮೀನಿನ ಪಹಣಿ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ಬೈಲಪ್ಪನವರ ಹೆಸರಿನಲ್ಲಿದೆ ಎನ್ನುತ್ತಾರೆ. ಪ್ರತಿವಾದಿ ತಂದೆಯ ಹೆಸರು ಬೈಲಪ್ಪ ಎಂದರೆ ಇರಬಹುದು. ನಮ್ಮ ದೊಡ್ಡಪ್ಪ ಜಮೀನು ಖರೀದಿಸಿದ ಮೇಲೆ ಹಕ್ಕು ಬದಲಾವಣೆ ನನ್ನ ಹೆಸರಿನಲ್ಲಿ ಆಗಿದೆ. ನಮ್ಮ ದೊಡ್ಡಪ್ಪ ಜಮೀನು ಖರೀದಿಸಿದ ನಂತರ ಅವರ ಹೆಸರಿಗೆ ಖಾತೆ ಸನ್ 1991-92 ರಲ್ಲಿ ಆಗಿದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ದೊಡ್ಡಪ್ಪನ ಹೆಸರಿನಲ್ಲಿ ಖಾತೆಯಾಗಿಲ್ಲ ಆ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸನ್ 1992 ರಲ್ಲಿ ಬೈಲಪ್ಪರಿಂದ ರಾಮಣ್ಣನವರ ಹೆಸರಿಗೆ ಹಕ್ಕುಬದಲಾವಣೆಯಾಗಿದೆ ಎಂದರೆ ಸರಿಯಲ್ಲ. ಮ್ಯುಟೇಶನ್ ಪ್ರತಿ, ಪಹಣಿ ಇವುಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಅಲ್ಪ ಸ್ವಲ್ಪ ಗೊತ್ತಿದೆ ಎನ್ನುತ್ತಾರೆ. ಸದರಿ ದಾಖಲೆಗಳನ್ನು ನೋಡಿದರೆ ನಿಮಗೆ ಅರ್ಥವಾಗುತ್ತಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ಅರ್ಥವಾಗುತ್ತದೆನ್ನುತ್ತಾರೆ. ಬೈಲಪ್ಪನವರಿಂದ ರಾಮಣ್ಣ ದಾವಾಸ್ತಿಯನ್ನು ಖರೀದಿಸಿಲ್ಲವೆಂದರೆ ಸರಿ. ಬೈಲಪ್ಪರಿಂದ ರಾಮಣ್ಣರವರಿಗೆ ಹೇಗೆ ಹಕ್ಕುಬದಲಾವಣೆಯಾಯಿತು ಎಂದರೆ ಸಾಕ್ಷಿಯು ಸನ್ 1952 ರಲ್ಲಿ

ಬೈಲಪ್ಪನವರು ಪೋಲೀಸ್ ಭೀಮನಗೌಡರಿಗೆ ಮಾರಾಟ ಮಾಡಿದ್ದರು, ನಂತರ 1955 ರಲ್ಲಿ ಪೊಲೀಸ್ ಭೀಮನಗೌಡರವರು ಜೀನಗಾರ ರಾಮಣ್ಣನವರಿಗೆ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ. 1952 ರಲ್ಲಿ ಬೈಲಪ್ಪನವರು ಪೋಲೀಸ್ ಭೀಮನಗೌಡರಿಗೆ ಮಾರಾಟ ಮಾಡಿದ ಬಗ್ಗೆ ಮ್ಯುಟೇಶನ್ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ಬೈಲಪ್ಪನವರಿಂದ ನನ್ನ ದೊಡ್ಡಪ್ಪನಾದ ರಾಮಣ್ಣನವರ ಹೆಸರಿಗೆ ಹಕ್ಕು ಬದಲಾವಣೆ ಸಮಯದಲ್ಲಿ ಬೈಲಪ್ಪ ಜೀವಂತ ಇರಲಿಲ್ಲವೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ಸನ್ 1967-68 ರಿಂದ 1992 ರವರೆಗೂ ದಾವಾ ಸ್ವತ್ತಿನ ಪಹಣಿ ಬೈಲಪ್ಪನವರ ಹೆಸರಿನಲ್ಲಿ ಇರುತ್ತದೆಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ.

ನನ್ನ ಹೆಸರಿನಲ್ಲಿ ಮ್ಯುಟೇಶನ್ ಆದಾಗ ನಮ್ಮ ತಂದೆ ಲಕ್ಷ್ಮಣ ಜೀವಂತ ಇದ್ದರು. ಸಾಮಾನ್ಯವಾಗಿ ಅಣ್ಣ ತಮ್ಮ ಇದ್ದಾಗ ಅವರ ನಡುವೆ ಪಾಲು ವಿಭಾಗವಾಗುತ್ತದೆಂದರೆ ಸರಿ. ರಾಮಣ್ಣನವರಿಂದ ಆಸ್ತಿಯು ನಿಮಗೆ ಏಕೆ ಬಂತು ಎಂದರೆ ಸಾಕ್ಷಿಯು ಒಂದೇ ಕುಟುಂಬದವರಾಗಿರುವುದರಿಂದ ಪಾಲುವಿಭಾಗದಲ್ಲಿ ಬಂದಿರುತ್ತದೆ. ಸದರಿ ಪಾಲುವಿಭಾಗದ ಬಗೆಗಿನ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪೊಲೀಸ್ ಪಾಟೀಲರಿಗೆ ದಾವಾಸ್ತಿಯನ್ನು ನಿಮ್ಮ ದೊಡ್ಡಪ್ಪ ರಿಂದಪ್ಪ ಇವರಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಅಧಿಕಾರ ಇರಲಿಲ್ಲವೆಂದರೆ ಸರಿಯಲ್ಲ. ಬೈಲಪ್ಪ ಪೊಲೀಸ್ ಪಾಟೀಲರಿಗೆ ಬರೆದುಕೊಟ್ಟರು ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ರಾಮಣ್ಣನಿಗೆ ಬರೆದುಕೊಟ್ಟ ಪತ್ರ ಸಹಾ ಸುಳ್ಳು ಎಂದರೆ ಸರಿಯಲ್ಲ. ಬೈಲಪ್ಪನಿಂದ ಪೊಲೀಸ್ ಪಾಟೀಲರಿಗೆ ಹಕ್ಕು ಬದಲಾವಣೆಯಾದ ಬಗ್ಗೆ ಯಾವುದೇ ದಾಖಲೆ ಇಲ್ಲವೆಂದರೆ ಇರಬಹುದು. ನಂತರ ಪೋಲೀಸ್ ಪಾಟೀಲರವರಿಂದ ನಮ್ಮ ದೊಡ್ಡಪ್ಪನ ಹೆಸರಿಗೆ ಹಕ್ಕು ಬದಲಾವಣೆಯಾದ ಬಗ್ಗೆ ಯಾವುದೇ ದಾಖಲೆ ಇಲ್ಲವೆಂದರೆ ಸರಿಯಲ್ಲ. ತದನಂತರ ರಾಮಣ್ಣನಿಗಹೆ ಬರೆದುಕೊಟ್ಟ ಬಗ್ಗೆ ಹಕ್ಕು ಬದಲಾವಣೆ ದಾಖಲೆ ಇಲ್ಲವೆಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ರಾಮಣ್ಣ ಬೈಲಪ್ಪನಿಗೆ ಬರೆದುಕೊಟ್ಟಿದ್ದಾರಂತಾ ಒಂದು ಸುಳ್ಳು ಮ್ಯುಟೇಶನ್ ನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ.

ಯಾವ ವರ್ಷದಿಂದ ನೀವು ದಾವಾಸ್ತಿಯನ್ನು ಸಾಗುವಳಿ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ನಮ್ಮ ದೊಡ್ಡಪ್ಪನ ಹೆಸರಿಗಾದ ದಿನದಿಂದ ನಾನು ಸಾಗುವಳಿ ಮಾಡುತ್ತಿದ್ದೇನೆ. ಸನ್ 2005-06 ರಲ್ಲಿ ದಾವಾ ಜಮೀನನ್ನು ಅಳತೆ ಮಾಡಲು ಬಂದಿದ್ದರು ಎಂದರೆ ನನಗೆ ನೋಟೀಸ್

ಮೂಲ ದಾವಾ ಸಂಖ್ಯೆ. 82/2015 ಪಿ ಡಬ್ಲ್ಯೂ 1 ಚಿತ್ರ ಗಾರ ಮಲ್ಲಿಕಾರ್ಜುನ ಬಿನ್ ಲಕ್ಷ್ಮಣಪ್ಪ

ಕೊಟ್ಟಿಲ್ಲ ಮಾಹಿತಿ ಇಲ್ಲ. ಸಾಗುವಳಿ ಜಮೀನನ್ನು ಅಳತೆ ಮಾಡಿ, ಸರ್ವೆಯವರು ಪಂಚನಾಮೆ ಮಾಡಿ, ಯಾರು ಸ್ವಾಧೀನದಲ್ಲಿರುತ್ತಾರಂತಾ ವರದಿ ಕೊಟ್ಟಿದ್ದಾರೆಂದರೆ ಸಾಕ್ಷಿಯು ಅವರು ಸೃಷ್ಟಿ ಮಾಡಿರಬಹುದು ನನಗೆ ಗೊತ್ತಿಲ್ಲವೆನ್ನುತ್ತಾರೆ. ದಾವಾ ಜಮೀನಿನಲ್ಲಿ ಯಾರು ಸ್ವಾಧೀನದಲ್ಲಿರುತ್ತಾರಂತಾ ನ್ಯಾಯಾಲಯಕ್ಕೆ ತಿಳಿಸಲು ದಾವಾ ಜಮೀನಿನ ಚಕ್ಕುಬಂದಿದಾರರ ಪ್ರಮಾಣಪತ್ರ ಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಲಾಗಿದೆ ಎಂದರೆ ಸಾಕ್ಷಿಯು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆನ್ನುತ್ತಾರೆ. ಅವರು ಯಾವುದೇ ತರಹ ಸುಳ್ಳು ದಾಖಲೆ ಮತ್ತು ಪ್ರಮಾಣಪತ್ರ ಗಳನ್ನು ಸಲ್ಲಿಸಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ ದಾವಾಸ್ತಿಯಲ್ಲಿ ಇವತ್ತಿಗೂ ಪ್ರತಿವಾದಿಯರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಈ ದಿವಸಕ್ಕೆ ಸದರಿ ಜಮೀನಿನಲ್ಲಿ ಮೆಕ್ಕೇಜೋಳ ಇದೆ. ಕಳೆದ ವರ್ಷ ಶೇಂಗಾ ಬೆಳೆ ಬೆಳೆದಿದ್ದೆ ಅದರ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾಸ್ತಿಗೂ ನನಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನೀವು ಎಂದಿಗೂ ಸ್ವಾಧೀನದಲ್ಲಿಲ್ಲ ಮತ್ತು ಸಾಗುವಳಿ ಮಾಡಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಇವತ್ತಿಗೂ ಪ್ರತಿವಾದಿಯರು ಸ್ವಾಧೀನದಲ್ಲಿರುತ್ತಾರೆ ನಾನು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ